ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 3, Nov-Dec 2019, 50-57
©*IIMRD*, Mysuru
IIMRD JOURNALS
www.iimrd.com

# ಕನ್ನಡ ಸಾಹಿತ್ಯಕ್ಕೆ ಕರ್ನಾಟಕದ ಜೈನ ಮಠಗಳ ಕೊಡುಗೆಗಳು

ಗಿರೀಶ್ ಎಚ್.ಎಂ.*

**ಪೀಠಿಕೆ**

ಭಾರತವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ಬೃಹತ್ ರಾಷ್ಟ್ರವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಯಶಸ್ವಿಯಾಗಬೇಕಾದರೆ, ದೇಶದ ರಾಜಕೀಯ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಪ್ರಜೆಯು ಸಕ್ರಿಯವಾಗಿ ಪಾಲ್ಗೊಭಾರತವು ವಿವಿಧತೆಯಿಂದ ಕೂಡಿರುವ ಏಕತೆಯ ರಾಷ್ಟ್ರವಾಗಿದೆ. ಇಂತಹ ನಾಡಿನಲ್ಲಿ ಹಲವಾರು ಧರ್ಮಗಳಿದ್ದು, ಏಕತೆಯ ಭಾವನೆಯನ್ನು ಬೆಳೆಸಿಕೊಂಡಿದೆ. ಕರ್ನಾಟಕಲ್ಲಿಯೂ ಕೂಡ ಅನೇಕ ಧರ್ಮಗಳು ಅಸ್ಥಿತ್ವದಲ್ಲಿದ್ದು, ಅವುಗಳಲ್ಲಿ ಜೈನಧರ್ಮವು ಕೂಡ ಒಂದಾಗಿದೆ. ಧರ್ಮದ ಉಳಿವಿಗಾಗಿ, ಏಳಿಗೆಗಾಗಿ ತನ್ನದೇ ನೀತಿನಿಯಮಗಳು, ಆಚಾರ-ವಿಚಾರಗಳು, ಸಂಪ್ರದಾಯಗಳು, ತತ್ವಗಳನ್ನು ಮೈಗೂಡಿಸಿಕೊಂಡ ಜೈನ ಧರ್ಮವು ಆಚರಣೆಯಲ್ಲಿ ಸರಳ ಜೀವನ ತತ್ವಗಳನ್ನು ಆಚರಣೆಗೆ ತಂದಿತು. ಅದರೊಂದಿಗೆ ಸಾಹಿತ್ಯದ ರಚನೆಯಲ್ಲಿ ತೊಡಗಿಸಿಕೊಂಡಿತು. ಪ್ರಾಕೃತ, ಸಂಸ್ಕೃತ, ಕನ್ನಡ ಮೊದಲಾದ ಜನಸಾಮಾನ್ಯರ ಭಾಷೆಗಳಲ್ಲಿ ಸಾಹಿತ್ಯದ ರಚನೆಯತ್ತ ಒಲವನ್ನು ತೋರಿಸಿತು. ಜನರ ಮನಸ್ಸನ್ನು ಮುಟ್ಟಲು ಯಶಸ್ಸನ್ನು ಪಡೆಯಿತು. ಪಂಡಿತರಿಗೆ, ಕವಿಗಳಿಗೆ, ವಿದ್ವಾಂಸರಿಗೆ ನೀಡಿದ ಪ್ರೋತ್ಸಾಹದೊಂದಿಗೆ ಸೂಕ್ತ ವೇದಿಕೆಯನ್ನು ಕಲ್ಪಿಸಿಕೊಟ್ಟಿತು. ಪರಿಣಾಮವಾಗಿ ನೂರಾರು ಗ್ರಂಥಗಳು ಜನ್ಮತಾಳಿದವು. ಕನ್ನಡ ನಾಡಿನ ಚರಿತ್ರೆಯನ್ನು ಬಿಂಬಿಸುವ ಪರಂಪರೆಯನ್ನು ಕೊಂಡಾಡುವ ಅತ್ಯಮೂಲ್ಯ ಗ್ರಂಥಗಳ ರಚನೆಗೆ ಕಾರಣವಾಯಿತು. ಸಾವಿರಾರು ಪುಸ್ತಕಗಳನ್ನು ಒಂದೆಡೆ ಸಂಗ್ರಹಿಸಲು ಸಾಧ್ಯವಾಯಿತು. ಪ್ರಾಚೀನ ಚರಿತ್ರೆಯನ್ನು ಇಂದಿಗೂ ಉಳಿಸಿಕೊಂಡು ಬಂದಿರುವ ಕರ್ನಾಟಕದ ಜೈನಮಠಗಳಲ್ಲಿ ಶ್ರವಣಬೆಳಗೊಳದ ಶ್ರೀ ಜೈನಮಠ, ಮೂಡಬಿದಿರೆಯ ಶ್ರೀ ಜೈನಮಠ, ಕನಕಗಿರಿಯ ಶ್ರೀ ಜೈನಕ್ಷೇತ್ರ, ಸಿಂಗನಗದ್ದೆ (ಬಸ್ತಿಮಠ), ಹೊಂಬುಜ ಜೈನ ಅತಿಶಯ ಕ್ಷೇತ್ರ, ಸ್ವಾದಿ ದಿಗಂಬರ ಶ್ರೀ ಜೈನಮಠ, ಕಂಬದಹಳ್ಳಿಯ ಜೈನಮಠ, ಕಾರ್ಕಳದ ಶ್ರೀ ಜೈನಮಠ ಮೊದಲಾದವುಗಳು ಪ್ರಮುಖವಾಗಿವೆ. ಇಂದಿಗೂ ಧಾರ್ಮಿಕ ಆಚರಣೆಯೊಂದಿಗೆ ಸಾಹಿತ್ಯಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ತೊಡಗಿಸಿಕೊಂಡು ಜನಮನ್ನಣೆಯನ್ನು ಪಡೆದು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿವೆ. ನಿರಂತರವಾಗಿ ಸಾಹಿತ್ಯಕ್ಕೆ ಕೊಡುಗೆಯನ್ನು ಸಲ್ಲಿಸುತ್ತ ಬಂದಿದೆ. ಜೈನಮಠಗಳು ಧಾರ್ಮಿಕ ಪಾಠ ಶಾಲೆಗಳಾಗಿ, ಧರ್ಮಶಾಸ್ತ್ರ ಸಂರಕ್ಷಣೆಯ ಭಂಡಾರಗಳಾಗಿ, ಕವಿ ಕಲಾವಿದರ ಆಶ್ರಯ ತಾಣಗಳಾಗಿ ಧಾರ್ಮಿಕ, ಸಾಮಾಜಿಕ, ಸಾಹಿತ್ಯ ಪ್ರಕಾಶನ ಸಂಸ್ಥೆಗಳಾಗಿ ರೂಪುಗೊಂಡಿವೆ. ಪೂರಕವಾಗಿ ಮಠದ ಪೀಠಾಧಿಪತಿಗಳು ಸಾಹಿತ್ಯ ಪ್ರೇಮಿಗಳಾಗಿದ್ದುಕೊಂಡು ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಶ್ರಮಿಸುತ್ತಿದ್ದಾರೆ. ಕರ್ನಾಟಕದಲ್ಲಿ ಇಂತಹ ಸಂಸ್ಕೃತಿ ಅಸ್ಥಿತ್ವದಲ್ಲಿದ್ದು, ಕನ್ನಡ

* *ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.*

ಸೇವೆಯನ್ನು ಮಾಡಿಕೊಂಡು ಬರುತ್ತಿರುವ ಪ್ರಮುಖ ಜೈನಮಠಗಳ ಕೊಡುಗೆಗಳನ್ನು ಸಂಶೋಧಕರು ಈ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ.

**ದಕ್ಷಿಣ ಭಾರತದಲ್ಲಿರುವ ಜೈನ ಮಠಗಳು**

ದಕ್ಷಿಣ ಭಾರತದಲ್ಲಿ ಅನೇಕ ಜೈನಮಠಗಳಿದ್ದು, ಅವುಗಳಲ್ಲಿ ಹೊಂಬುಜ ಜೈನ ಮಠಕ್ಕೆ ಪ್ರಮುಖ ಸ್ಥಾನವಿದೆ. ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನಲ್ಲಿರುವ ಶ್ರೀ ಕ್ಷೇತ್ರವು ಪ್ರಾಚೀನ ಚರಿತ್ರೆಯನ್ನು ಹೊಂದಿದೆ. ಪೂರ್ವ ಪರಂಪರೆಯ ಮಠಾಧೀಶರ ನೇತೃತ್ವದಲ್ಲಿ ಬಹಳ ಅಭಿವೃದ್ಧಿಯನ್ನು ಕಾಣುತ್ತಿದೆ. ಕುಂದಕುಂದಾಚಾರ್ಯರು ಈ ಮಠದ ಪೂರ್ವ ಪೀಠಾಧಿಪತಿಗಳಾಗಿದ್ದರು. ಅವರಿಂದ ಹಿಡಿದು ಪ್ರಸ್ತುತ ಪೀಠಾಧಿಪತಿಗಳವರೆಗು ಸಾಹಿತ್ಯ ಸೇವೆಯನ್ನು ಮಾಡುತ್ತ ಬಂದಿದ್ದಾರೆ. ಆದಿಕವಿ ಪಂಪ ತನ್ನ ಆದಿಪುರಾಣ, ಶಾಂತಿನಾಥರ ಸುಕುಮಾರ ಚರಿತೆಯಲ್ಲಿ, ನಾಗಚಂದ್ರ, ನಯಸೇನ, ಪಾಯಣ್ಣವರ್ಣಿಯ ಜ್ಞಾನಚಂದ್ರ ಚರಿತೆ, ಬಾಹುಬಲಿ ಪಂಡಿತನ ಧರ್ಮನಾಥ ಪುರಾಣ, ದೇವಪ್ಪ ಕವಿಯ ರಾಮ ವಿಜಯ, ಗುಣವರ್ಮನ ಪುಷ್ಪದಂತ ಪುರಾಣ ಮೊದಲಾದ ಕೃತಿಗಳಲ್ಲಿ ಕುಂದಕುಂದಾಚಾರ್ಯರ ಜೀವನ ಕುರಿತು ಉಲ್ಲೇಖ ಸಿಗುತ್ತದೆ. ಕುಂದಕುಂದಾಚಾರ್ಯರು ವಿದ್ವಾಂಸರಾಗಿದ್ದರು. ಕನ್ನಡ ಸಾಹಿತ್ಯದಲ್ಲಿ ತೊಡಗಿಸಿಕೊಂಡು ಸೇವೆಯನ್ನು ಮಾಡಿದ್ದಾರೆಂಬುದು ದಾಖಲೆಗಳಿಂದ ಉಲ್ಲೇಖಿತಗೊಂಡಿದೆ. ಸ್ವಸ್ತಿಶ್ರೀ ಶ್ರೀಶ್ರೀಶ್ರೀ ಮದ್ದೇವೇಂದ್ರ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯರು ಮತ್ತು ಪ್ರಸ್ತುತ ಪೀಠಾಧಿಪತಿಗಳು ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯುಳ್ಳವರು. ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಬೆಳವಣಿಗೆಗೆ ನಿರಂತರವಾಗಿ ಪ್ರೋತ್ಸಾಹವನ್ನು ನೀಡುತ್ತಿದ್ದಾರೆ. ಮಠದ ಅಧೀನದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳನ್ನು ತೆರೆದು ಸಾವಿರಾರು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿದೆ.

"ಶ್ರೀಜೈನಮಠವು 'ಗುರುದೇವ' ಎಂಬ ಪಾಕ್ಷಿಕ ಧಾರ್ಮಿಕ ಪತ್ರಿಕೆಯನ್ನು ಹೊರತರುತ್ತಿದೆ. ಇದರ ಸಂಪಾದಕರಾಗಿ ಇಂದಿನ ಭಟ್ಟಾರಕರು ಮುಂದುವರಿಯುತ್ತಿದ್ದಾರೆ. ಧರ್ಮದ ವಿಚಾರಗಳೊಂದಿಗೆ ಸಾಮಾಜಿಕ ಹಾಗೂ ಸಾಹಿತ್ಯಿಕ ವಿಚಾರಗಳನ್ನು ಉತ್ತಮ ಲೇಖನಗಳನ್ನು ಪ್ರಕಟಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಪ್ರತಿವರ್ಷವು ಶ್ರೀಮಠದ ವತಿಯಿಂದ ಸರ್ವೋದಯ ಧರ್ಮಸಮ್ಮೇಳನ, ಸರ್ವೋದಯ ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸುತ್ತಿದೆ. ಅಲ್ಲದೆ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸಾಧನೆ ಮಾಡಿರುವುದ್ನು ಗುರುತಿಸಿ ದೇವೇಂದ್ರ ಕೀರ್ತಿ ಪ್ರಶಸ್ತಿ, ಪಂಚಜಯಂತೋತ್ಸವ ಪ್ರಶಸ್ತಿ, ದಿ.ನೆಲ್ಲಿಕಾರು ರಾಧಮ್ಮ ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತಿದೆ."[1] ಸಿದ್ಧಾಂತ ಕೀರ್ತಿ ಗ್ರಂಥಮಾಲೆ ಎಂಬ ಪ್ರಕಾಶನದಡಿಯಲ್ಲಿ ಹಲವಾರು ಪುಸ್ತಕಗಳನ್ನು ಪ್ರಕಟಿಸಿದೆ. ಅವುಗಳಲ್ಲಿ "ಹೋಮನಿಧಿ ಮತ್ತು ಕ್ರಿಯಾದರ್ಪಣ, ಶ್ರೀಕುಂದಕುಂದರು, ಹರಪ್ಪ ಮತ್ತು ಜೈನಧರ್ಮ, ಸಂಗೀತ ಪೂಜಾಷ್ಟಕ, ವರ್ಧಮಾನ ಚರಿತೆ, ಹೊಂಜು ಕ್ಷೇತ್ರ : ಒಂದು ಅಧ್ಯಯನ, ಕನ್ನಡ ತಿರುಕ್ಕುರಳ್, ಶಾಂತರರು : ಒಂದು ಅಧ್ಯಯನ, ಹೊಂಬುಜ ಕ್ಷೇತ್ರ ಅನುಸಂಧಾನ, ಜೀವಸಂಬೋಧನಂ, ತತ್ತ್ವಾರ್ಥ ಸೂತ್ರಾನುಗತ ಕರ್ಣಾಟಕ ಲಘುವೃತ್ತಿ, ಷೋಡಶಕ್ರಿಯಾದರ್ಪಣಂ, ಸಾಗಾರಧರ್ಮ – ಸಾರ, ಶ್ರೀ ಶಾರದಾ ಸ್ತೋತ್ರಕಲ್ಪಂ,

ಅಷ್ಟಪಾಹುಡ, ಚಾತುರ್ಯಾಮ ಧರ್ಮ ಅಚೇಲಕ–ಸಚೇಲಕ ಧರ್ಮ ಶ್ರುತಾವತರಣ ಇತಿಹಾಸ"[2] ಮೊದಲಾದ ಗ್ರಂಥಗಳನ್ನು ಪ್ರಕಟ ಮಾಡಿರುವ ಕೀರ್ತಿ ಈ ಕ್ಷೇತ್ರಕ್ಕೆ ಸಲ್ಲುತ್ತದೆ. ಶ್ರೀ ಜೈನಮಠವು ಉತ್ತಮವಾದ ಗ್ರಂಥಾಲಯ ವ್ಯವಸ್ಥೆಯನ್ನು ಹೊಂದಿದೆ. ಕನ್ನಡ ಹಾಗೂ ಇತರೆ ಭಾಷೆಗಳನ್ನು ಒಳಗೊಂಡಂತೆ ಸಾವಿರಾರು ಪುಸ್ತಕಗಳನ್ನು ಸಂಗ್ರಹಿಸಿ ಸಂರಕ್ಷಿಸುತ್ತಿದೆ. "ಸುಮಾರು 15000 ತಾಡಪ್ರತಿಗಳನ್ನು ದೇಶದ ಮೂಲೆ ಮೂಲೆಗಳಿಂದ ಸಂಪಾದಿಸಿ ಸಂರಕ್ಷಿಸಿದೆ."[3] ಅವುಗಳನ್ನು ವ್ಯವಸ್ಥಿತವಾಗಿ ನುರಿತ ಅನುಭವಿ ವಿದ್ವಾಂಸರಿಂದ ಗ್ರಂಥರೂಪದಲ್ಲಿ ಹೊರತರುವ ಸಲುವಾಗಿ ಯೋಜನೆಯನ್ನು ರೂಪಿಸಿಕೊಂಡು ಕಾರ್ಯವನ್ನು ನಿರ್ವಹಿಸುತ್ತಿದೆ. ದೊರೆತ ಹಸ್ತಪ್ರತಿಗಳಲ್ಲಿ ಕನ್ನಡದ ಹಸ್ತಪ್ರತಿಗಳು ಇರುವುದು ಕನ್ನಡ ಸಾಹಿತ್ಯ ಬೆಳವಣಿಗೆಗೆ ಪೂರಕವಾದ ವಿಷಯವಾಗಿದೆ.

**ಸ್ವಾದಿ ದಿಗಂಬರ ಜೈನಮಠ**

ಈ ಮಠವು ಕೂಡ ತುಂಬಾ ಪ್ರಾಚೀನವುಳ್ಳ ಮಠವಾಗಿದ್ದು, ಪೂರ್ವದಲ್ಲಿದ್ದ ಇಲ್ಲಿನ ಭಟ್ಟಾರಕರು ಧಾರ್ಮಿಕ ಆರಾಧನೆಯೊಂದಿಗೆ ಸಾಹಿತ್ಯದ ಆರಾಧನೆ ಹಾಗೂ ರಚನೆಯಲ್ಲಿ ಕೃಷಿಗೈದಿದ್ದಾರೆ. ಆ ಕೆಲಸವನ್ನು ಇಂದಿಗೂ ಶ್ರೀ ಜೈನಮಠ ಸಾಹಿತ್ಯ ಸಂರಕ್ಷಣೆ ಹಾಗೂ ಪ್ರಕಟಣೆಯ ವೇದಿಕೆಯನ್ನು ಸೃಷ್ಟಿಸಿ ಮುಂದುವರಿಸಿಕೊಂಡು ಬರುತ್ತಿದೆ. ಶ್ರೀಜೈನಮಠದ ಭಟ್ಟಾರಕರಾಗಿದ್ದ ಅಕಲಂಕರು ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಆಗಮ, ತರ್ಕ, ನ್ಯಾಯ, ಮೊದಲಾದ ವಿಷಯಗಳಲ್ಲಿ ಪಾಂಡಿತ್ಯವನ್ನು ಗಳಿಸಿದವರು. ಇವರು ಜೈನಧರ್ಮ ಮತ್ತು ಶಾಸ್ತ್ರಕ್ಕೆ ಸಂಬಂಧಿಸಿದಂತೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಇವರ ಪಾತ್ರ ಗಣ್ಯವಾದುದು. ಆತ್ಮಮೀಮಾಂಸೆ, ಪ್ರಮಾಣ ಸಂಗ್ರಹ, ನ್ಯಾಯ–ನಿಶ್ಚಯ ಸಿದ್ದಿನಿಶ್ಚಯ, ಲಘೀಯಸ್ತೀಯ, ಅಕಲಂಕ ಸ್ತೋತ್ರ ಇವು ಇವರು ರಚಿಸಿದ ಪ್ರಮುಖ ಕೃತಿಗಳಾಗಿವೆ. ಕ್ರಿ.ಶ. 1604 ರಲ್ಲಿದ್ದ ಪ್ರಸಿದ್ದ ವೈಯಾಕರಣಿ ಭಟ್ಟಾಕಲಂಕರು ಸಹ ಈ ಮಠದ ಅಧಿಪತಿಗಳಾಗಿದ್ದವರು. ಸಾಹಿತ್ಯದ ಮೇಲೆ ಅಪಾರ ಒಲವನ್ನು ತೋರಿದವರು. ಸಂಸ್ಕೃತ, ಪ್ರಾಕೃತ, ಕನ್ನಡ, ಮಾಗಡಿ ಹೀಗೆ ಆರು ಭಾಷೆಗಳನ್ನು ಬಲ್ಲವರಾಗಿದ್ದರು. ತರ್ಕಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ನ್ಯಾಯಶಾಸ್ತ್ರ ಮೊದಲಾದ ವಿಷಯಗಳಲ್ಲಿ ಪಾಂಡಿತ್ಯಗಳಿಸಿದವರು. 'ಕರ್ಣಾಟ ಶಬ್ದಾನುಶಾಸನ' ಎಂದೆ ಪ್ರಸಿದ್ಧಿ ಪಡೆದ ಕೃತಿಯನ್ನು ರಚಿಸಿದವರು. ಇದು ವ್ಯಾಕರಣದ ವಿಷಯವನ್ನು ತಿಳಿಸುವ ಅತ್ಯಂತ ಅಮೂಲ್ಯವಾದ ವ್ಯಾಕರಣ ಗ್ರಂಥವಾಗಿದೆ.

ಶ್ರೀ ಜೈನಮಠವು ತನ್ನ ಅಧೀನದಲ್ಲಿ 'ಸ್ವಾದಿ ಪ್ರಕಾಶನ' ಸಂಸ್ಥೆಯನ್ನು ತೆರೆದಿದೆ. ಇದರ ಮೂಲಕ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹಲವಾರು ಪುಸ್ತಕಗಳನ್ನು ಪ್ರಕಟಿಸುವ ಕಾರ್ಯವನ್ನು ಮಾಡುತ್ತಿದೆ. ಕನ್ನಡ ಕವಿಗಳಿಗೆ ಪ್ರೋತ್ಸಾಹವನ್ನು ನೀಡಿ ಗ್ರಂಥರಚನೆಗೆ ಪ್ರೇರೇಪಿಸಿ ಅವುಗಳಿಗೆ ಒಂದು ಸೂಕ್ತವಾದ ವೇದಿಕೆಯನ್ನು ಕಲ್ಪಿಸಿಕೊಟ್ಟಿದೆ. ಹೊಸ ಹೊಸ ವಿಷಯಗಳನ್ನು ಸಂಶೋಧನೆ ಮಾಡುವ ಸಂಶೋಧಕರಿಗೆ ಪುಸ್ತಕಗಳನ್ನು ಹೊರತರುವ ಸೂಕ್ತ ವೇದಿಕೆ ಇದಾಗಿದೆ. ಆ ಮೂಲಕ ತನ್ನ ಸಾಹಿತ್ಯವು ಉತ್ತುಂಗ ಶಿಖರವನ್ನು ತಲುಪಲು ಬೇಕಾದ ಸೇವೆಯನ್ನು ಮಾಡುತ್ತಿದೆ. ಅವುಗಳಲ್ಲಿ ಕ್ಷೇತ್ರಗಣಿತ, ಜೈನತೀರ್ಥಂಕರ ಕೇವಲಜ್ಞಾನ ವೃಕ್ಷಗಳು, ಭಟಾಕಲಂಕ ಚರಿತೆ ಮತ್ತು ದ್ವಾದಶಾನುಪ್ರೇಕ್ಷೆ, ಶ್ರೀಸ್ವಾದಿ ದಿಗಂಬರ ಜೈನಸಂಸ್ಥಾನ

ಮತ ಪರಿಚಯ ಮೊದಲಾದ ಪುಸ್ತಕಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸುವ ಸೇವೆಯನ್ನು ಮಾಡಿದೆ.

**ಮೂಡಬಿದಿರೆ ಶ್ರೀ ಜೈನಮಠ**

ಈ ಮಠವು ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿದೆ. ಪ್ರಾಚೀನ ಪರಂಪರೆಯ ಚರಿತ್ರೆ ಇರುವ ಮಠ. ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಹಾಗೂ ಸಾಹಿತ್ಯಿಕವಾಗಿ ತೊಡಗಿಸಿಕೊಂಡು ಅನನ್ಯ ಕೊಡುಗೆಯನ್ನು ನೀಡುತ್ತಿದೆ. ಪ್ರಸ್ತುತ ಇಲ್ಲಿನ ಭಟ್ಟಾರಕರು ವಿದ್ವಾಂಸರಾಗಿದ್ದು ಸಾಹಿತ್ಯಸಕ್ತರಾಗಿದ್ದಾರೆ. ಶ್ರೀಜೈನಮಠವು ಮೂಡಬಿದಿರೆಯ ಪರಿಸರದಲ್ಲಿದೆ. ಕನ್ನಡದ ಶ್ರೇಷ್ಠ ಕವಿ ಸಾಂಗತ್ಯ ಕವಿ ಎಂಬ ಬಿರುದಿಗೆ ಖ್ಯಾತಿ ಪಡೆದ ರತ್ನಾಕರವರ್ಣಿಯು ಜನಿಸಿದ ಪುಣ್ಯಭೂಮಿ. ಕವಿ ಈ ಮಠದೊಂದಿಗೆ ನೇರ ಸಂಪರ್ಕದಲ್ಲಿದ್ದರು ಎಂಬುದಾಗಿ ಶಾಸನಗಳಿಂದ ತಿಳಿದುಬಂದಿದೆ. ತನ್ನದೇ ಆದ ಗ್ರಂಥಾಲಯವನ್ನು ತೆರೆದು ಸಾವಿರಾರು ಪುಸ್ತಕಗಳನ್ನು ಮತ್ತು ಓಲೆಗರಿಗಳನ್ನು ಸಂರಕ್ಷಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದೆ. ಇಲ್ಲಿ ಸಂಸ್ಕೃತ, ಪ್ರಾಕೃತ, ಕನ್ನಡ, ಪಾಲಿ ಮೊದಲಾದ ಭಾಷೆಗಳ ಪುಸ್ತಕಗಳಿವೆ. "ಛಂದೋಗ್ರಂಥಗಳು, ಮಂತ್ರಶಾಸ್ತ್ರ, ಕಥಾಸಾಹಿತ್ಯ, ಜ್ಯೋತಿಷ್ಯ, ಪುರಾಣಗಳು, ಇತಿಹಾಸ, ಗಣಿತಶಾಸ್ತ್ರ, ಸಿದ್ಧಾಂತ ಗ್ರಂಥಗಳು, ಭಜನೆ ಗೀತೆಗಳು, ನಾಟಕಗಳು, ವ್ರತವಿಧಾನಗಳು, ಕೋಶಗಳು, ದರ್ಶನಶಾಸ್ತ್ರ, ಆಯುರ್ವೇದ, ಶಿಲ್ಪಶಾಸ್ತ್ರ, ಕರ್ಮಕಾಂಡ"[4] ಮೊದಲಾದವುಗಳು ಪ್ರಮುಖವಾಗಿವೆ.

ಶ್ರೀ ಜೈನಮಠವು ತನ್ನ ಆಶ್ರಯದಲ್ಲಿ ಸ್ವತಃ ಪ್ರಕಾಶನವನ್ನು ತೆರೆದಿದೆ. ಆ ಮೂಲಕ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿ ಕನ್ನಡಿಗರಿಗೆ ಓದಲು ಅವಕಾಶವನ್ನು ಕಲ್ಪಿಸಿದೆ. ಕನ್ನಡವಲ್ಲದೆ ಇತರೆ ಸಾಹಿತ್ಯ ಪುಸ್ತಕಗಳನ್ನು ಪ್ರಕಟಿಸಲು ಅವಕಾಶ ಮಾಡಿಕೊಟ್ಟಿದೆ. ದ್ವಾದಶಾನುಪ್ರೇಕ್ಷೆ, ಬಾಲಸಂಸ್ಕರಣ, ಭಾಷಾಕಮ್ಮಟ, ಬಸದಿಗಳ ಜೀರ್ಣೋದ್ಧಾರ, ಷಟ್ಖಂಡಾಗಮ, ಮಹಾವೀರ ವಿಶೇಷ ಸಂಚಿಕೆ ಮೊದಲಾದ ಪುಸ್ತಕಗಳನ್ನು ಪ್ರಕಟಿಸಿದೆ. "ವಿವೇಕಾಭ್ಯುದಯ" ಎಂಬ ಮಾಸಪತ್ರಿಕೆಯನ್ನು ಮಠದಿಂದ ಹೊರತರಲಾಗಿದೆ. ಧಾರ್ಮಿಕ ವಿಷಯಗಳಲ್ಲದೆ ಸಾಹಿತ್ಯಕ ವಿಚಾರಗಳನ್ನು ಉತ್ತಮ ಲೇಖನಗಳನ್ನು ಓದುಗರಿಗೆ ತಲುಪಿಸುತ್ತಿದೆ. ಶ್ರೀಮಠದ ಭಂಡಾರವು ಶ್ರೀಮತಿ ರಮಾರಾಣಿ ಜೈನ ಸಂಶೋಧನ ಸಂಸ್ಥಾನ ಎಂಬ ಹೆಸರಿನಿಂದ ಅನೇಕ ಮೌಲಿಕ ಗ್ರಂಥಗಳನ್ನು ಪರಿಷ್ಕರಿಸುವ ಸಂಶೋಧನೆ ಮಾಡುತ್ತಿದೆ. ಸುಮಾರು 2500 ಓಲೆಗರಿ ಗ್ರಂಥಗಳನ್ನು ಸಂರಕ್ಷಿಸಲಾಗಿದೆ."[5] ಸಾಹಿತ್ಯ, ಸಂಶೋಧನೆ ಮಾಡಲು ದೇಶ–ವಿದೇಶಗಳಿಂದ ಬಂದ ವಿದ್ಯಾರ್ಥಿಗಳಿಗೆ ಬಹಳ ಅಪೂರ್ವವಾದ ಮೌಲ್ಯಯುತವಾದ ಆಕರಗಳನ್ನು ಒದಗಿಸುವಲ್ಲಿ ಸಮರ್ಥವಾಗಿದೆ. ಮಠದ ವತಿಯಿಂದ ಪ್ರತಿವರ್ಷ ಜೈನಸಾಹಿತ್ಯ ಸಮ್ಮೇಳನ, ಜೈನ ಶ್ರವಣ ಸಂಸ್ಕೃತಿ ಸಮ್ಮೇಳನವನ್ನು ಆಯೋಜಿಸಿದೆ. ಜೈನಸಂಸ್ಕೃತಿ ಸಾಹಿತ್ಯ ಧರ್ಮವನ್ನು ಉಳಿಸಿಬೆಳೆಸಿಕೊಂಡು ಬರುತ್ತಿರುವುದು ಶ್ರೀಮಠದ ಶ್ರೇಷ್ಠ ಸಾಧನೆಯಾಗಿದೆ.

**ಕನಕಗಿರಿ ಶ್ರೀ ಜೈನಕ್ಷೇತ್ರ**

ಈ ಕ್ಷೇತ್ರವು ಚಾಮರಾಜನಗರ ಜಿಲ್ಲೆಯಲ್ಲಿರುವ ಜೈನರ ಪವಿತ್ರ ಸ್ಥಳಗಳಲ್ಲಿ ಒಂದು. ಸ್ವಾದಿ ದಿಗಂಬರ ಜೈನಮಠದೊಂದಿಗೆ ನೇರ ಸಂಪರ್ಕವನ್ನು ಹೊಂದಿದೆ. ಈ ಮಠವು ಪ್ರಾಚೀನ ಚರಿತ್ರೆಯುಳ್ಳ

ಸ್ಥಳವಾಗಿದೆ. ಸ್ವಾದಿಶ್ರೀ ಜೈನಮಠದ ಭಟ್ಟಾಕಳಂಕರು ಈ ಕ್ಷೇತ್ರಕ್ಕೆ ಭೇಟಿಕೊಡುತ್ತಿದ್ದರೆಂದು ರಾಜಾವಳಿ ಕಥಾಸಾರದಿಂದ ತಿಳಿದುಬಂದಿದೆ. ಪೂಜ್ಯಪಾದ ಮುನಿಗಳು ಸಹ ಭೇಟಿಕೊಟ್ಟು ಜನರಿಗೆ ಬೋಧನೆಯನ್ನು ಮಾಡುತ್ತಿದ್ದರೆಂದು ಪುಸ್ತಕಗಳಿಂದ ಉಲ್ಲೇಖಿತವಾಗಿದೆ. ಜೈನಧರ್ಮದ ಸಾಂಸ್ಕೃತಿಕತೆಯೊಂದಿಗೆ ಸಾಹಿತ್ಯ ಸಾಂಸ್ಕೃತಿಕತೆಯನ್ನು ನಿರಂತರವಾಗಿ ರೂಢಿಸಿಕೊಂಡು ಸೇವೆಯನ್ನು ಸಲ್ಲಿಸುವ ಮಠವಾಗಿದೆ. ಪೂಜ್ಯಪಾದ ಮುನಿಗಳು ಸಮಾಧಿ ಶತಕ, ಇಷ್ಟೋಪದೇಶ, ಶಾಂತ್ಯಾಷ್ಟಕ, ಜೈನೇಂದ್ರ ವ್ಯಾಕರಣ, ವೈದ್ಯಗ್ರಂಥ ಎಂಬ ಅಮೂಲ್ಯವಾದ ಪುಸ್ತಕವನ್ನು ಬರೆದಿದ್ದಾರೆ. ಶ್ರೀಜೈನಕೇತ್ರದ ಸಂಪರ್ಕದಲ್ಲಿದ್ದ ದೇವಚಂದ್ರನು ಒಬ್ಬ ಶ್ರೇಷ್ಠ ಕವಿಗಳಲ್ಲಿ ಒಬ್ಬ. ರಾಜಾವಳಿ ಕಥಾಸಾರ, ಪೂಜ್ಯಪಾದ ಚರಿತೆ, ರಾಮಕಥಾವತಾರ, ಭಕ್ತಿಸಾರ, ಶತಕತ್ರಯ ಎಂಬ ಪುಸ್ತಕಗಳನ್ನು ಬರೆದಿದ್ದಾರೆ. ಶ್ರೀಜೈನಕ್ಷೇತ್ರವು 'ಕನಕಗಿರಿ ಪ್ರಕಾಶನ' ಎಂಬ ಸಂಸ್ಥೆಯನ್ನು ತೆರೆದಿದೆ. ಸಾಹಿತ್ಯ ಪುಸ್ತಕಗಳಿಗೆ, ಸಾಹಿತ್ಯಾಸಕ್ತರಿಗೆ ಒಳ್ಳೆಯ ವೇದಿಕೆಯನ್ನು ನೀಡಿದೆ. ಧಾರ್ಮಿಕವಾಗಿ ಮತ್ತು ಲೌಕಿಕವಾಗಿ ಮೂಡಿಬಂದ ಎಲ್ಲಾ ವರ್ಗದ ವಿಷಯದ ಪುಸ್ತಕಗಳನ್ನು ಪ್ರಕಟಿಸಿದೆ. ಶ್ರೀಕ್ಷೇತ್ರ ಕನಕಗಿರಿ, ಸತಿಧರ್ಮಸಾರ ಹೀಗೆ ಬೇರೆ ಬೇರೆ ಪುಸ್ತಕಗಳು ಪ್ರಕಾಶನದಿಂದ ಮುದ್ರಿತಗೊಂಡಿವೆ.

**ಶ್ರವಣಬೆಳಗೊಳ ಶ್ರೀ ಜೈನಮಠ**

ಶ್ರವಣಬೆಳಗೊಳ ಶ್ರೀ ಜೈನಮಠವು ಕನ್ನಡ ನಾಡಿನ ಪವಿತ್ರ ಯಾತ್ರಾಸ್ಥಳವಾಗಿದೆ. ಜೈನಧರ್ಮದ ಬೀಜ ಅಂಕುರಿಸಿದ ಪವಿತ್ರ ಸ್ಥಳ, ಉತ್ತರ ಭಾರತದಿಂದ ಕರ್ನಾಟಕಕ್ಕೆ ಕ್ರಿ.ಪೂ. 300ರ ವೇಳೆಗೆ ಜೈನಧರ್ಮವು ಬೇರೂರಿದ ತಾಣವಾಗಿದ್ದು, ಹಾಸನ ಜಿಲ್ಲೆಯ ಚೆನ್ನರಾಯಪಟ್ಟಣದಲ್ಲಿದೆ. ಶ್ರೀ ಜೈನಮಠದ ಪೀಠಾಧಿಪತಿಗಳ ಶ್ರಮದಿಂದ ಸಾಕಷ್ಟು ಅಭಿವೃದ್ಧಿಯನ್ನು ಹೊಂದಿದೆ. ಜೈನ ಸಂಸ್ಕೃತಿಯನ್ನು ಪ್ರಸಾರ ಮಾಡಿದ ಕೀರ್ತಿ ಈ ಮಠಕ್ಕೆ ಸಲ್ಲುತ್ತದೆ. ಶ್ರವಣಬೆಳಗೊಳದ ಪರಿಸರದಲ್ಲಿ ಹಲವಾರು ಕವಿಗಳು ಕಂಡುಬಂದಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಗುರುತಿಸಿಕೊಂಡು ಪುಸ್ತಕಗಳನ್ನು ಬರೆದಿದ್ದಾರೆ. "ಚಂದ್ರಗುಪ್ತ ಗ್ರಂಥಮಾಲೆ" ಎಂಬ ಪ್ರಕಾಶನವನ್ನು ಸ್ವತಂತ್ರವಾಗಿ ತೆರೆದಿದೆ. ಸಾಹಿತ್ಯ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವ ಜವಬ್ದಾರಿಯನ್ನು ಹೊಂದಿದೆ. ಅದರಂತೆ "ಭುಜಬಲ ಚರಿತೆ, ಶ್ರವಣಬೆಳಗೊಳ ವಾಸ್ತುಶಿಲ್ಪ, ಶಾಂತಿದಾರ, ಶ್ರವಣಬೆಳಗೊಳ ಶ್ರೀ ಜೈನಮಠದ ತಾಡಪ್ರತೀಯ ಗ್ರಂಥಸೂಚಿ, ಆದಿಪುರಾಣ ದೀಪಿಕೆ, ಜೈನ ಮಹಾಭಾರತ, ತೀರ್ಥಂಕರ ವರ್ಧಮಾನ ಕನ್ನಡ ಕಾವ್ಯ ಸಂಪುಟ, ಸ್ವಸ್ತಿಶ್ರೀ ನೇಮಿಸಾಗರ ವರ್ಣಿಗಳು, ಸೂರಿಪಂಡಿತ ಚರಿತೆ"[6] ಹೀಗೆ ಕನ್ನಡವಲ್ಲದೆ ಇತರೆ ಭಾಷೆಯ ಪುಸ್ತಕಗಳನ್ನು ಸಾಹಿತ್ಯದ ಲೋಕಕ್ಕೆ ಪರಿಚಯಿಸಿದ ಕೀರ್ತಿ ಈ ಸಂಸ್ಥೆಗಿದೆ. "ಆಗಮ ದರ್ಶನ ಎಂಬ ಹೆಸರಿನ ಸಂಸ್ಥೆಯನ್ನು ತೆರೆದು ಪ್ರಾಚೀನ ಕಾಲದ ಹಸ್ತಪ್ರತಿಗಳನ್ನು ಸಂಗ್ರಹಿಸಿಡಲಾಗಿದೆ. ಸುಮಾರು 5000 ಹಸ್ತಪ್ರತಿಗಳನ್ನು ಸಂಗ್ರಹಿಸಲಾಗಿದೆ. ಯಾವುದೇ ರೀತಿ ಹಾನಿಯಾಗದಂತೆ ಆಧುನಿಕ ರೀತಿಯಲ್ಲಿ ವ್ಯವಸ್ಥಿತವಾಗಿ ಸಂರಕ್ಷಿಸಲಾಗಿದೆ. ಅವುಗಳಲ್ಲಿ ಜ್ಯೋತಿಷ್ಯಶಾಸ್ತ್ರ, ಗಣಿತ, ವೈದ್ಯಶಾಸ್ತ್ರ, ತರ್ಕಶಾಸ್ತ್ರ, ವ್ಯಾಕರಣ, ಕರ್ಮಕಾಂಡ, ಪ್ರತಿಷ್ಠಾ ಪೂಜಾ, ಕಲೆ ಮತ್ತು ವಾಸ್ತುಶಿಲ್ಪ, ಸಂಗೀತ, ಅಲಂಕಾರ, ನಾಟಕ, ಚರಿತ್ರೆ, ಕಥೆ"[7] ಹೀಗೆ ವಿವಿಧ ಭಾಷೆಯ ಹಲವಾರು ವಿಷಯಗಳ ಹಸ್ತಪ್ರತಿಗಳು ಇಲ್ಲಿವೆ. ಅವುಗಳನ್ನು ಪುಸ್ತಕ ರೂಪದಲ್ಲಿ ತರಲು ಪ್ರಯತ್ನ ಮಾಡಲಾಗಿದೆ. ಅನೇಕ ಹಸ್ತಪ್ರತಿಗಳು ಪುಸ್ತಕವಾಗಿ ಓದುಗರ ಕೈ ಸೇರಿಸಿದ ಕೀರ್ತಿಯನ್ನು ಶ್ರೀಮಠವು ಪಡೆದಿದೆ. ಪ್ರತಿವರ್ಷ ಜೈನ ಸಾಹಿತ್ಯ ಸಮ್ಮೇಳನವನ್ನು, ಸರ್ವಧರ್ಮ ಸಮ್ಮೇಳನವನ್ನು ವಿಚಾರಗೋಷ್ಠಿಗಳನ್ನು

ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
IIMRD JOURNALS

ಆಯೋಜಿಸಿ ಯಶಸ್ವಿಯಾಗಿಸಿದೆ. ಇಲ್ಲಿನ ಪೀಠಾಧಿಪತಿಗಳು ವಿವಿಧ ಭಾಷಾ ಪಂಡಿತರಾಗಿದ್ದಾರೆ. ಸಾಹಿತ್ಯದಲ್ಲಿ ಬಹಳಷ್ಟು ಆಸಕ್ತಿಯನ್ನು ಹೊಂದಿದ್ದಾರೆ. ಪ್ರಾಕೃತ ಭಾಷೆಯೊಂದಿಗೆ ಕನ್ನಡ ಸಾಹಿತ್ಯದ ಮೇಲೆ ಹೆಚ್ಚು ಒಲವನ್ನು ಹೊಂದಿದ್ದು, ದೇಶದ ಬೇರೆ ಬೇರೆ ಭಾಗಗಳಿಂದ ಪುಸ್ತಕವನ್ನು ಒಂದೆಡೆ ಕಲೆ ಹಾಕುವಲ್ಲಿ ಶ್ರಮಿಸುತ್ತಿದ್ದಾರೆ.

**ಬಸ್ತಿಮಠ**

ಬಸ್ತಿಮಠವು ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರದಲ್ಲಿದೆ. ಈ ಮಠಕ್ಕೆ ಸಿಂಹನಗದ್ದೆ ಎಂಬ ಹೆಸರಿದ್ದು ಜೈನರ ಯಾತ್ರಾಸ್ಥಳವಾಗಿದೆ. ಕನ್ನಡ ನಾಡಿನ ಪ್ರಮುಖ ಜೈನಧರ್ಮದ ನೆಲೆವೀಡಾಗಿ ಇಂದಿಗೂ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕವಾಗಿ ದುಡಿಯುತ್ತಿದೆ. ಬರುವ ಯಾತ್ರಾರ್ಥಿಗಳಿಗೆ ಉಳಿದುಕೊಳ್ಳಲು ಸೂಕ್ತ ಕೊಠಡಿಗಳ ವ್ಯವಸ್ಥೆಯನ್ನು ಮಾಡಿಕೊಟ್ಟಿದೆ. ಗುರುಕುಲ ಪದ್ಧತಿಯನ್ನು ಮುಂದುವರಿಸಿಕೊಂಡು ಬಂದಿದೆ. ಮಠಗಳು ಹಿಂದಿನಿಂದಲು ವಿದ್ಯಾ ಕೇಂದ್ರಗಳಾಗಿದ್ದವು ಅದರಂತೆ ತನ್ನ ಅಧೀನದಲ್ಲಿ ಶಾಲೆಯನ್ನು ತೆರೆದು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡಲು ಅನುವು ಮಾಡಿಕೊಟ್ಟಿದೆ. ಗೋವುಗಳ ಬಲಿ ಮತ್ತು ಹಿಂಸೆಯನ್ನು ನಾಶಮಾಡಲು ಗೋಶಾಲೆಯನ್ನು ತೆರೆದು ರಕ್ಷಣೆಗೆ ಆದ್ಯತೆಯನ್ನು ನೀಡಿದೆ. ಎಲ್ಲಾ ಮಠಗಳಲ್ಲಿ ಇರುವಂತೆ ಇಲ್ಲಿನ ಭಟ್ಟಾರಕರು ಪರಂಪರೆಯಿಂದ ವಿದ್ವಾಂಸರಾಗಿದ್ದರು. ಹಲವಾರು ಭಾಷೆಗಳನ್ನು ಬಲ್ಲ "ಪಂಡಿತರು ಶ್ರೀಸಮಂತ ಭದ್ರರು ಧಾರ್ಮಿಕ ಹಾಗು ಸಾಹಿತ್ಯಿಕವಾಗಿ ತಮ್ಮನ್ನು ತೊಡಗಿಸಿಕೊಂಡವರು. ಧರ್ಮದ ಜೊತೆಯಲ್ಲಿ ಸಾಹಿತ್ಯದ ಕೃತಿಗಳು ರಚಿಸಿದವರು. ಸ್ವಯಂಭುಸ್ತೋತ್ರ, ಜಿನಸ್ತುತಿ ಶತಕ, ರತ್ನಕರಂಡಕ, ಜೀವಸಿದ್ಧಿ, ತತ್ವಾನುಶಾಸನ, ರತ್ನಕರಂಡಕ, ಶ್ರಾವಕಾಚಾರ, ಗಂಥಹಸ್ತ ಮಹಾಭಾಷ್ಯ, ಪುಸ್ತಕಗಳನ್ನು ರಚಿಸಿ ಸಾಹಿತ್ಯ ಕೃಷಿಗೈದಿದ್ದಾರೆ."[8] ಶ್ರೀಮಠದಲ್ಲಿ "ವರ್ಣಿಗಜಿ ಗ್ರಂಥಮಾಲೆ" ಎಂಬ ಗ್ರಂಥಾಲಯವಿದೆ. ಕನ್ನಡ, ಹಿಂದಿ, ಪ್ರಾಕೃತ, ಸಂಸ್ಕೃತಿ, ಇಂಗ್ಲಿಷ್ ಭಾಷೆಯ ನೂರಾರು ಕೃತಿಗಳನ್ನು ಸಂಗ್ರಹಿಸಿದ್ದಾರೆ. ಹಿಂದೆ ಮಠದವತಿಯಿಮದ 'ಸುಮಂತ ಭದ್ರವಾಣಿ' ಎಂಬ ಧಾರ್ಮಿಕ ಸಮಾಚಾರ ಮಾಸಪತ್ರಿಕೆ ಹೊರಡುತ್ತಿತ್ತು. ಈ ಪತ್ರಿಕೆ ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ವಿಚಾರಗಳ ಉತ್ತಮ ಲೇಖನಗಳನ್ನು ಹೊರತರಲಾಗುತ್ತಿತ್ತು. ಆದರೆ ಇಂದು ಆ ಪತ್ರಿಕೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವಲ್ಲಿ ವಿಫಲತೆಯನ್ನು ಪಡೆದಿರುವುದು ಗಮನಕ್ಕೆ ಬಂದಿದೆ. ಆದರೂ ಕಲೆ, ವಾಸ್ತುಶಿಲ್ಪ ಸಾಹಿತ್ಯ ರಂಗದಲ್ಲಿ ಮುಂದುವರಿದಿರುವುದು ಶ್ರೀಮಠದ ಹೆಗ್ಗಳಿಕೆಗೆ ಪಾತ್ರವಾಗಿದೆ.

**ಕಾರ್ಕಳ ಜೈನಮಠ**

ಕನ್ನಡ ನಾಡಿನಲ್ಲಿರುವ ಕಾರ್ಕಳ ಜೈನಮಠವು ಸಾಹಿತ್ಯರಂಗದಲ್ಲಿ ಗುರುತಿಸಿಕೊಂಡಿರುವ ಪ್ರಮುಖ ಜೈನಮಠವಾಗಿದೆ. ಕಲೆ ಮತ್ತು ವಾಸ್ತುಶಿಲ್ಪಕ್ಕೆ ವಿಶಿಷ್ಟವಾದ ಕೊಡುಗೆಯನ್ನು ನೀಡಿದೆ. ಹುಬ್ಬಳ್ಳಿಯ ಸಮೀಪದಲ್ಲಿರುವ ವರೂರು ಜೈನಮಠ ಸಾಹಿತ್ಯಿಕವಾಗಿ ಹೆಚ್ಚು ತೊಡಗಿಸಿಕೊಂಡಿಲ್ಲದಿದ್ದರು ಸಾಮಾಜಿಕವಾಗಿ ಉಳಿದ ಮಠಗಳಿಗಿಂತ ಮುಂದೆ ಇದೆ. ಮಠದ ಸ್ವಾಮಿಗಳು ಸಾಹಿತ್ಯ ಆರಾಧಕರು, ಸಾಹಿತ್ಯದ ಮೇಲೆ ಒಲವನ್ನು ತೋರಿದವರು. ಸುಮಾರು 40 ಕ್ಕೂ ಅಧಿಕ ಗ್ರಂಥಗಳನ್ನು ಹಿಂದಿ ಭಾಷೆಯಲ್ಲಿ ರಚಿಸಿ ಹೊರತಂದಿರುವ ಕೀರ್ತಿ ಇವರಿಗೆ ಸಲ್ಲುತ್ತದೆ. ಆಧುನಿಕ ಶೈಲಿಯ ಗ್ರಂಥಾಲಯವನ್ನು

ಪ್ರಕಾಶನ ಸಂಸ್ಥೆಯನ್ನು ತೆರೆದಿದೆ. ಸಾಹಿತ್ಯದ ಹಲವಾರು ಪುಸ್ತಕಗಳನ್ನು ಹೊರತಂದಿದೆ. ವಿದ್ಯಾರ್ಥಿಗಳಿಗೆ ಹಲವಾರು ಶಾಲಾ ಕಾಲೇಜುಗಳನ್ನು ಸ್ಥಾಪಿಸಿದೆ. ಸು.8000 ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇದು ವಿದ್ಯಾಭ್ಯಾಸಕ್ಕೆ ನೀಡಿದ ಅಮೋಘ ಕಾಣಿಕೆಯಾಗಿದೆ.

**ಉಪಸಂಹಾರ**

ಒಟ್ಟಾರೆ ಕರ್ನಾಟಕದಲ್ಲಿರುವ ಪ್ರತಿಯೊಂದು ಧರ್ಮವು ತಾನು ಉಳಿದು ಬೆಳೆಯಬೇಕಾದರೆ ತನ್ನದೇ ವಿಶಿಷ್ಟವಾದ ಛಾಪನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಅದರಂತೆ ಜೈನಧರ್ಮ ತನ್ನ ಅಸ್ತಿತ್ವಕ್ಕಾಗಿ ಸಾಹಿತ್ಯ ರಚನೆ ಕಡೆ ಗಮನ ಹರಿಸಿತು. ಒಂದು ವಿದ್ವಾಂಸ ಬಳಗ, ಒಂದು ಗ್ರಂಥಾಲಯ, ಒಂದು ಮುದ್ರಣ ಸಂಸ್ಥೆ, ಪ್ರಕಾಶನ ಮಾಡುವ ಎಲ್ಲಾ ಕೆಲಸವನ್ನು ಜೈನಮಠಗಳು ಮಾಡುತ್ತಿವೆ. ಬಹಳಷ್ಟು ವರ್ಷಗಳ ಹಿಂದೆ ರಾಜಮಹಾರಾಜರ ಕಾಲದಲ್ಲಿನ ಚರಿತ್ರೆಯನ್ನು ಒಮ್ಮೆ ಅವಲೋಕಿಸಿದಾಗ ರನ್ನನ ಪೋಷಕರಾದ ಅತ್ತಿಮಬ್ಬೆ ನಿಷ್ಠ ಜೈನ ಧರ್ಮಿಯಳಾಗಿದ್ದಳು. ಆ ಕಾಲದಲ್ಲಿಯೇ ಪೊನ್ನ ಕವಿಯ ಶಾಂತಿಪುರಾಣ ಕಾವ್ಯವನ್ನು ಸಾವಿರ ಪ್ರತಿಗಳನ್ನು ಮುದ್ರಿಸಿ ವಿದ್ವಾಂಸರ ಬಳಗಕ್ಕೆ ಹಂಚಿದಳು. ಧರ್ಮಬೆಳೆಯ ಬೇಕಾದರೆ ಸಾಹಿತ್ಯ ಅಗತ್ಯವೆಂಬುದು ಆಕೆಗೆ ಅದಾಗಲೇ ಗಮನಕ್ಕೆ ಬಂದಿರುವುದನ್ನು ಗಮನಿಸಬಹುದು. ಕನ್ನಡ ನಾಡಿನಲ್ಲಿ ಸಾಹಿತ್ಯ ಕೃಷಿ ಪ್ರಾರಂಭಿಸಿದವರು ಸದ್ಯದ ದಾಖಲೆಯ ಪ್ರಕಾರ ಜೈನರೆಂಬುದು ಖಚಿತವಾಗಿದೆ. ಹತ್ತನೆಯ ಶತಮಾನದವರೆಗೂ ನೂರಾರು ಕವಿಗಳನ್ನು ಕನ್ನಡ ಸಾಹಿತ್ಯಕ್ಕೆ ಪರಿಚಯಿಸಿದ ಕೀರ್ತಿ ಜೈನಧರ್ಮಕ್ಕೆ ಸಲ್ಲುತ್ತದೆ. ಆದರೆ ತದನಂತರದ ವರ್ಷಗಳಲ್ಲಿ ಇತರೆ ಕಾರಣಗಳಿಂದಾಗಿ ಇಳಿಮುಖದತ್ತ ಮುಖಮಾಡಿತು. ಆದರೂ ಸಾಹಿತ್ಯದ ಚಟುವಟಿಕೆಯನ್ನು ನಿಲ್ಲಿಸದೆ ಮುಂದುವರಿಸಿಕೊಂಡು ಸಾಗುವ ಕೆಲಸವನ್ನು ಜೈನಮಠಗಳು ಮಾಡುತ್ತಿವೆ. ಕನ್ನಡ ಸಾಹಿತ್ಯದ ಕಿರೀಟವನ್ನು ಮೇಲೇರಿಸಲು ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿರುವುದು ಅನನ್ಯವಾದ ವಿಚಾರವಾಗಿದೆ.

**ಕೊನೆಟಿಪ್ಪಣಿ**

1. ರವೀಂದ್ರನಾಥ ಕೆ. (2007). ಕರ್ನಾಟಕ ಮಠಗಳು ಮತ್ತು ಕನ್ನಡ ಸಾಹಿತ್ಯ, ಪು.62
2. ಅದೇ., ಪು.63
3. ಅದೇ., ಪು.63
4. ಅದೇ., ಪು.64
5. ಅದೇ., ಪು.65
6. ಅದೇ., ಪು.59
7. ಅದೇ., ಪು.60
8. ಅದೇ., ಪು.68

## ಪರಾಮರ್ಶನ ಗ್ರಂಥಗಳು


- ಬೊಪ್ಪಣ (2000). ಗೊಮ್ಮಟ ಜಿನಸ್ತುತಿ. ಜೈನ ಅಧ್ಯಯನ ಕೇಂದ್ರ, ಶ್ರೀ ಜೈನಮಠ ಶ್ರೀ ಕ್ಷೇತ್ರ, ಶ್ರವಣಬೆಳಗೊಳ.
- ಕಲಘಟಗಿ ಟಿ.ಜಿ. (ಸಂ). (1976). ಕರ್ನಾಟಕದಲ್ಲಿ ಜೈನಧರ್ಮ ಒಂದು ಅಧ್ಯಯನ. ಜೈನಶಾಸ್ತ್ರ ಮತ್ತು ಪ್ರಾಕೃತಿಕ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ.
- ಮುಗಳಿ ರಂ.ಶ್ರೀ. (1990). ಕನ್ನಡ ಸಾಹಿತ್ಯ ಚರಿತ್ರೆ. ಗೀತಾ ಬುಕ್ ಹೌಸ್, ಮೈಸೂರು
- ನಾಗರಾಜಯ್ಯ ಪ. ಶ್ರೀ ಕ್ಷೇತ್ರ ಕನಕಗಿರಿ. ಕನಕಗಿರಿ ಪ್ರಕಾಶನ, ಮಲೆಯೂರು.
- ರೊಟ್ಟಿಗವಾಡ, ಚಂದ್ರಶೇಖರ. (2006). ಹೊಂಬುಜ ಕ್ಷೇತ್ರ ಒಂದು ಅಧ್ಯಯನ. ಶ್ರೀ ಸಿದ್ಧಾಂತ ಕೀರ್ತಿ ಗ್ರಂಥಮಾಲೆ, ಶ್ರೀಹೊಂಬುಜ ಜೈನಮಠ.
- ರವೀಂದ್ರನಾಥ ಕೆ. (2007). ಕರ್ನಾಟಕ ಮಠಗಳು ಮತ್ತು ಕನ್ನಡ ಸಾಹಿತ್ಯ. ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಶ್ರೀ ಪ್ರಭುದೇವ ಸಂಸ್ಥಾನ, ವಿರಕ್ತ ಮಠ, ಸೊಂಡುರು.
- ಶೆಟ್ಟಿ ಎಸ್.ಡಿ. (2002). ತುಳುನಾಡಿನ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಎಂ.ಜಿ.ಎಂ, ಕಾಲೇಜು, ಉಡುಪಿ.
- ಶಿರೂರ ಬಿ.ವಿ. (1972). ಶ್ರವಣಬೆಳಗೊಳ ರಾಜಕೀಯ, ಸಾಹಿತ್ಯಿಕ ಸಾಂಸ್ಕೃತಿಕ ಮಹತ್ವ. ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.
- ಸ್ವಸ್ತಿಶ್ರೀ ದೇವೆಂದ್ರ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯ. (1989). ಶ್ರೀಕುಂದ ಕುಂದರ ಬದುಕು–ಬರಹ. ಶ್ರೀ ಸಿದ್ಧಾಂತ ಕೀರ್ತಿ ಗ್ರಂಥಮಾಲೆ, ಶ್ರೀ ಹೊಂಬುಜ ಜೈನಮಠ.
- ವಸಂತಕುಮಾರಿ. (2012). ಮೈಸೂರು ಅರಸರ ಕಾಲದಲ್ಲಿ ಜೈನರ ಸಮಾಜೋ ಧಾರ್ಮಿಕ ಜೀವನ ಕ್ರಿ.ಶ. 1600–1900. ಜೈನ ಅಧ್ಯಯನ ಕೇಂದ್ರ, ಶ್ರೀ ಜೈನಮಠ ಶ್ರೀ ಕ್ಷೇತ್ರ, ಶ್ರವಣಬೆಳಗೊಳ.